ಸಿ. ಸಿ. ನಂ.- **328/2018**

ಪಿ.ಡಬ್ಲ್ಯೂ.. **1**

ಸಾಕ್ಷಿಯು ದಿನಾಂಕ- **21-11-2023** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಕೆ.ವೈ ವಕೀಲರಿಂದ -

ನಾನು ಟೈಪಿಂಗ್ ಕೆಲಸ ಮಾಡುತ್ತೇನೆ. **2016-17** ರಲ್ಲಿ ನಾನು ಮನೆಯಲ್ಲಿ ಕಿರಣಿ ಅಂಗಡಿ ಇಟ್ಟುಕೊಂಡಿದ್ದೆ. ನಾನು ಬಿ.ಎ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ತಿಂಗಳಿಗೆ ರೂ. **15** ರಿಂದ **20** ಸಾವಿರ ದುಡಿಯುತ್ತೇನೆ. **2016-17** ರಲ್ಲಿ ನನಗೆ ಎಷ್ಟು ಆದಾಯ ಇತ್ತು ಎಂದು ಈಗ ಹೇಳಲಾಗುವುದಿಲ್ಲ. **2016-17** ರಲ್ಲಿ ಆದಾಯ ತೆರಿಗೆ ಕಟ್ಟಿದ್ದಿರಾ ಎಂದರೆ ನನಗೆ ಮಾಹಿತಿ ಇಲ್ಲ. ನನ್ನ ಕುಟುಂಬಕ್ಕೆ ಬಿ.ಪಿ.ಎಲ್ ಕಾರ್ಡ್ ಇರುತ್ತದೆ. ಆ ಬಿ.ಪಿ.ಎಲ್ ಕಾರ್ಡ್ **2016** ರಿಂದ ಇಲ್ಲಿಯವರೆಗೆ ಇದೆ ಎಂದರೆ ಸರಿ. ನನ್ನ ಗಂಡ ಖಾಸಗಿ ಕೆಲಸ ಮಾಡುತ್ತಾರೆ.

ಆರೋಪಿಯು ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನ್ನ ಬಳಿ ಹಣ ಪಡೆದುಕೊಳ್ಳುವಾಗ ನಾನು ಹೊರ ದೇಶದಿಂದ ಮಟೀರಿಯಲ್ ಗಳನ್ನು ನಮ್ಮ ದೇಶಕ್ಕೆ ತರಿಸಿ ಮಾರುತ್ತೇನೆಂದು ಆರೋಪಿ ಹೇಳಿರುತ್ತಾರೆಂದು ನುಡಿಯುತ್ತಾರೆ. **2017** ರಲ್ಲಿ ಆರೋಪಿ ಎಲ್ಲಿ ವಾಸವಿದ್ದರು ಎಂದರೆ ಅವರ ಆಧಾರ್ ಕಾರ್ಡ್ ನಂತೆ ರಾಮಾ ಟಾಕೀಸ್ ಬಳಿ ವಾಸವಿದ್ದರು ಎಂದು ಹೇಳುತ್ತಾರೆ. ನನ್ನ ದೂರು ಮತ್ತು ಲೀಗಲ್ ನೋಟೀಸ್ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ವಕೀಲರು ಆರೋಪಿಗೆ ಯಾವ ವಿಳಾಸಕ್ಕೆ ನೋಟೀಸ್ ನೀಡಿರುತ್ತಾರೆಂದು ನನಗೆ ಗೊತ್ತು. ಸದರಿ ವಿಳಾಸವನ್ನು ಆಧಾರ್ ಮೇಲೆ ನಾನೇ ಅವರಿಗೆ ತಿಳಿಸಿರುತ್ತೇನೆ. ಲೀಗಲ್ ನೋಟೀಸ್ ನಲ್ಲಿ ಬರೆದ ವಿಳಾಸ ಹೇಳಬಹುದಾ ಎಂದರೆ ಆ ಬಗ್ಗೆ ವಕೀಲರಿಗೆ ತಿಳಿಸಿರುತ್ತೇನೆ.

**2017** ರಲ್ಲಿ ಆರೋಪಿ ಜೆಸ್ಕಾಂ ಕಛೇರಿ, ಟಿ.ಬಿ ಡ್ಯಾಂ ನಲ್ಲಿ ವಾಸವಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅಲ್ಲೆ ಅಕ್ಕ-ಪಕ್ಕ ವಾಸವಿದ್ದರೆಂದು ನುಡಿಯುತ್ತಾರೆ. ನಿ.ಪಿ **5** ರಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಅದು

ಅವರದ್ದೆ ಸಹಿ. ಆರೋಪಿಗೆ ಇಂಗ್ಲೀಷ್ ನಲ್ಲಿ ಸಹಿ ಮಾಡುವುದು ಬಿಟ್ಟರೆ ಆಂಗ್ಲ ಭಾಷೆ ಮತ್ತು ಕನ್ನಡ ಭಾಷೆ ಓದಲು, ಬರೆಯಲು ಬರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ.

ನನ್ನ ಗಂಡ ಜನರಿಗೆ ಬ್ಯಾಂಕ್ ಮೂಲಕ ಸಾಲ ಕೊಡಿಸುವುದು, ತೆಗೆದುಕೊಳ್ಳುವುದು ಕೆಲಸ ಮಾಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಬ್ಯಾಂಕ್ ಬಗ್ಗೆ ಮಾಹಿತಿ ಕೊಡುತ್ತಾರೆಂದು ನುಡಿಯುತ್ತಾರೆ. ಸಾಮಾನ್ಯವಾಗಿ ಯಾವುದೇ ವ್ಯಕ್ತಿ ನನ್ನ ಗಂಡನ ಬಳಿ ಸಾಲದ ಬಗ್ಗೆ ಕೇಳಿದಾಗ ಮ್ಯಾನೇಜರ್ ಗೆ ಪರಿಚಯ ಮಾಡಿಸಿ ಸಹಾಯ ಮಾಡುತ್ತಾರೆ ಎಂದರೆ ಸರಿ. ಕೊಂಡನಾಯಕನಹಳ್ಳಿ, ಶಿವಜ್ಯೋತಿ ಟೌನ್ ಶಿಪ್ ನಲ್ಲಿ ನನ್ನ ಹೆಸರಿನಲ್ಲಿ ಪ್ಲಾಟ್ ಇತ್ತು ಎಂದರೆ ಸರಿ. ಆ ಪ್ಲಾಟ್ ನ್ನು **2016** ರಲ್ಲಿ ನಾನು ಆರೋಪಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಮಾರಾಟದ ವ್ಯವಹಾರ ನನ್ನ ಗಂಡ ಮುಖಾಂತರ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಓರಿಯಂಟಲ್ ಬ್ಯಾಂಕ್ ನಲ್ಲಿ ಆರೋಪಿಗೆ ಸಾಲವನ್ನು ತೆಗೆದುಕೊಟ್ಟು ನನ್ನ ಹೆಸರಿನಲ್ಲಿರುವ ಪ್ಲಾಟ್ ನ್ನು ನೊಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡ ಬೇರೆಯವರ ಮನೆ ತೋರಿಸಿ ಪ್ಲಾಟ್ ನ್ನು ಮೋಸ ಮಾಡುವ ಉದ್ದೇಶದಿಂದ ನೊಂದಣಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಈ ಬಗ್ಗೆ ಓರಿಯಂಟಲ್ ಬ್ಯಾಂಕ್ ಪಂಜಾಬ್ ನ್ಯಾಷನಲ್ ಬ್ಯಾಂಕ್ ನಲ್ಲಿ ಮರ್ಜ್ ಆದ ನಂತರದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್ ನವರು ನನ್ನ ವಿರುದ್ಧ, ನನ್ನ ಗಂಡನ ವಿರುದ್ಧ ಮತ್ತು ಆರೋಪಿಯ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕಲಂ **420** ಅಡಿಯಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ಬ್ಯಾಂಕ್ ಮ್ಯಾನೇಜರ್ ಸಹ ಆರೋಪಿ ಆಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪರಾಧಕ್ಕೆ ಸಂಬಂಧಿಸಿದಂತೆ ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಸಿ.ಸಿ **840/2020** ಎಂದು ರೆಜಿಸ್ಟರ್ ಆಗಿದೆ ಎಂದರೆ ಸರಿ. ನಾನು, ನನ್ನ ಗಂಡ ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಬ್ಯಾಂಕ್ ಅಧಿಕಾರಿ

ಜೊತೆಯಲ್ಲಿ ಶಾಮೀಲಾಗಿ ಆರೋಪಿಯ ಹಸರಿಗೆ ಲೋನ್ ಮಾಡಿಸಿ ಪ್ಲಾಟ್ ನೊಂದಣಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಗಂಡ ಆರೋಪಿಗೆ ಓರಿಯಂಟಲ್ ಬ್ಯಾಂಕ್ ನಲ್ಲಿ ಖಾತೆಯನ್ನು ತೆಗೆಸಿಕೊಟ್ಟಿರುತ್ತಾರೆ ಎಂದರೆ ಸಹಾಯ ಕೇಳಿದ್ದಕ್ಕೆ ತೆಗೆದುಕೊಟ್ಟಿರುತ್ತಾರೆ. ಖಾತೆ ತೆರೆದ ನಂತರ ಸದರಿ ಖಾತೆಗೆ ಸಂಬಂಧಿಸಿದಂತೆ ಇರುವ ಚೆಕ್ ಪುಸ್ತಕವನ್ನು ನನ್ನ ಗಂಡ ಮತ್ತು ನಾನು ನಮ್ಮ ಬಳಿ ಇಟ್ಟುಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಚೆಕ್ ಪುಸ್ತಕದಲ್ಲಿರುವ ಚೆಕ್ ನ್ನು ದುರುಪಯೋಗಪಡಿಸಿಕೊಂಡು ರೂ. **7,50,000/-** ಗಳನ್ನು ಆರೋಪಿಗೆ ಸಾಲವನ್ನಾಗಿ ನೀಡಿದ್ದೇವೆಂದು ಈ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ.

ನಿ.ಪಿ **1** ರಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ, ಅದನ್ನು ಆರೋಪಿಯ ಸಹಿಗೆ ಹೋಲುವ ತರ ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ **1** ರಲ್ಲಿರುವ ಬರಹಗಳು ಆರೋಪಿ ಬರೆದಿರುವುದಿಲ್ಲ ಅದನ್ನು ನಾನೇ ಭರ್ತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಎಸ್.ಆರ್ ನಗರದಲ್ಲಿ ವಾಸವಿದ್ದಾರೆಂದು ನನಗೆ ಗೊತ್ತು ಎಂದರೆ ನಾನು ಆಧಾರ್ ಕಾರ್ಡ್ ನಂತೆ ಹೋಗಿರುತ್ತೇನೆ. ನಿ.ಪಿ **3** ರಲ್ಲಿ ಇರುವ ವಿಳಾಸದಲ್ಲಿ ಆರೋಪಿ ವಾಸವಿಲ್ಲ ಎಂದು ನನಗೆ ಗೊತ್ತಿದ್ದರು ಆ ವಿಳಾಸಕ್ಕೆ ನಾನು ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಆರೋಪಿಯು ವಿಳಾಸ ಬದಲಾವಣೆ ಮಾಡಿದ್ದಕ್ಕೆ ಅವರ ಅಣ್ಣ ಕೆಲಸ ಮಾಡುವ ವಿಳಾಸಕ್ಕೆ ನೋಟೀಸ್ ಕಳುಹಿಸಿರುತ್ತೇನೆ. ಆರೋಪಿ ಮತ್ತು ಅವರ ಅಣ್ಣನ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ ಎಂಬ ವಿಚಾರ ನನಗೆ ಗೊತ್ತಿದ್ದರು ಸಹ ಉದ್ದೇಶ ಪೂರ್ವಕವಾಗಿ ಆ ವಿಳಾಸಕ್ಕೆ ನೋಟೀಸ್ ಕಳುಹಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ **5** ರಲ್ಲಿರುವ ಸಹಿ ಆರೋಪಿಯ ಅಥವಾ ಅವರ ಅಣ್ಣನ ಸಹಿ ಅಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹಣವನ್ನು ಸಾಲವನ್ನಾಗಿ ಆರೋಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಅಷ್ಟು ಆರ್ಥಿಕ ಸಾಮರ್ಥ ಇಲ್ಲ ಎಂದರೆ ನಾನು ರೂ. **22** ಲಕ್ಷಕ್ಕೆ ಸೈಟ್ ನ್ನು ಮಾರಾಟ ಮಾಡಿದ್ದು, ಆ ಮೂಲಕ

ಬಂದಿರುವ ಹಣ ಆರೋಪಿಗೆ ನೀಡಿರುತ್ತೇನೆ. ನನ್ನ ಬಳಿ ಇರುವ ಆರೋಪಿಯ ಆಧಾರ್ ಕಾರ್ಡ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ ಎಂದರೆ ಆಗ ಇತ್ತು ಈಗ ಹುಡುಕಬೇಕಾಗುತ್ತದೆ ಎಂದು ನುಡಿಯುತ್ತಾರೆ. ನನ್ನ ಬಿ,ಪಿ.ಎಲ್ ಕಾರ್ಡ್ ನ್ನು ಅವಶ್ಯಕತೆ ಇದ್ದರೆ ನ್ಯಾಯಾಲಯಕ್ಕೆ ಸಲ್ಲಿಸುತ್ತೇನೆ.

ಕಿರಣಿ ಅಂಗಡಿ ಇರುವ ಬಗ್ಗೆ ಫೋಟೋಗಳನ್ನು ನ್ಯಾಯಾಲಯಕ್ಕೆ ಹಾಕುತ್ತೇನೆ. ಆರೋಪಿಗೆ ಹಣದ ಅವಶ್ಯಕತೆ ಇರಲಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಅವರು ನನ್ನ ಬಳಿ ಸಾಲ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಲೀಗಲ್ ನೋಟೀಸ್ ತಲುಪಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು,
ಹೊಸಪೇಟೆ.